ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಹೆಸರು	:	ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು)
ಚುಕ್ಕೆ ಗುರುತಿಲ್ಲದೆ ಪ್ರಶ್ನೆ ಸಂಖ್ಯೆ	:	1088
ಉತ್ತರಿಸಬೇಕಾದ ದಿನಾಂಕ	:	21.09.2021
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	2002–03 ರಿಂದ ಇಲ್ಲಿಯವರೆಗೂ ಮೈಸೂರು ತಾಲ್ಲೂಕು ಕೋ–ಅಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ನಿ., ಮೈಸೂರು ಸಂಸ್ಥೆಯಲ್ಲಿ ನಿವೇಶನ ಹಂಚಿಕೆ ಪ್ರಕ್ರಿಯೆಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸರ್ಕಾರದ ಕ್ರಮವೇನು? (ವಿವರ ನೀಡುವುದು)	ಮೈಸೂರು ತಾಲ್ಲೂಕು ಕೋ–ಅಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್ ನಿ., ಮೈಸೂರು ಈ ಸಂಘವು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಲೀಸ್–ಕಂ–ಸೇಲ್ ಆಧಾರದಲ್ಲಿ 10 ಎಕರೆ ಜಮೀನನ್ನು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಪಡೆದಿದ್ದು, ಈ ಭೂಮಿಯಲ್ಲಿ ಕನಿಷ್ಠ 50*80 ಅಳತೆಯ 66 ನಿವೇಶನಗಳನ್ನು ರಚಿಸಿ, ಕೈಗಾರಿಕಾ ನಿವೇಶನಗಳೆಂದು ತನ್ನ ಸದಸ್ಯರಿಗೆ ಲೀಸ್–ಕಂ–ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಿದೆ. ಸದಸ್ಯರಿಗೆ ಶುದ್ಧ ಕ್ರಮ ಪತ್ರಗಳನ್ನು ಮಾಡಿಕೊಡುವ ಕ್ರಮ ಸಂಘದಲ್ಲಿ ಬಾಕಿ ಇರುತ್ತದೆ. ಈ ನಡುವೆ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರಗಳು ನಡೆದಿದೆ ಎಂದು ದೂರುಗಳು ಸ್ವೀಕೃತವಾದ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 64ರ ಶಾಸನಬದ್ಧ ವಿಚಾರಣೆಗೆ ಆದೇಶ ಸಂಖ್ಯೆ: ಡಿಆರ್‌ಎಂ/ಬಿ–1/ಎಕ್ಸ್‌ಎಸ್‌ಎನ್/ಸಿಆರ್–13/2009–10 ದಿನಾಂಕ: 18.07.2009 ಒಟ್ಟು 09 ಅಂಶಗಳನ್ನು ವಿಚಾರಣಾ ಅಂಶಗಳನ್ನಾಗಿಸಿ ಆದೇಶಿಸಲಾಗಿದೆ. ವಿಚಾರಣಾ ವರದಿ ಸ್ವೀಕೃತವಾಗಿ ಸಹಕಾರ ಸಂಘಗಳ ಉಪನಿಬಂಧಕರು, ಮೈಸೂರು ರವರು ಕಲಂ 68ರ ಆದೇಶವನ್ನು ಸಹಾ ಹೊರಡಿಸಿರುತ್ತಾರೆ. ಒಟ್ಟು 09 ಆರೋಪಗಳು ಸಾಬೀತಾಗಿದ್ದು, ತದನಂತರ ಸಂಘದವರು ನೀಡಿದ ಅನುಪಾಲನ ವರದಿಯಂತೆ 07 ಅನುಪಾಲನಾ ವರದಿಯನ್ನು ಒಪ್ಪಲಾಗಿದೆ. ಸಂಘವು ಆರೋಪವಾರು ಅನುಪಾಲನಾ ವರದಿಯನ್ನು ದಿನಾಂಕ: 12.07.2011 ರಿಂದ 02.08.2014 ರವರೆಗೆ (ಒಟ್ಟು 06 ಅನುಪಾಲನಾ ವರದಿಗಳನ್ನು) ಹಾಗೂ 18.12.2020, 12.02.2021, 10.03.2021 ಮತ್ತು 05.04.2021 ರಂದು ಸಲ್ಲಿಸಿದ್ದು, ಅನುಪಾಲನೆಯನ್ನು ಪರಿಶೀಲಿಸಿ, 07 ಆರೋಪಗಳ ಅನುಪಾಲನಾ ವರದಿಯು ಸಮಂಜಸವಾಗಿದೆ ಎಂದು ಒಪ್ಪಿ ಕೈಬಿಡಲಾಗಿದೆ. ಇನ್ನುಳಿದ 02 ಆರೋಪಗಳ ಸಂಬಂಧ ಸಂಘದ ಅನುಪಾಲನೆಯು ಸಮಂಜಸವಾಗಿಲ್ಲವೆಂದು ಪರಿಶೀಲನೆಗೆ ಒಳಪಡಿಸಲಾಗಿದ್ದು, ಸದರಿ ಆರೋಪಗಳಿಗೆ ನಿಯಮಾನುಸಾರ ಸೂಕ್ತ ಕ್ರಮಕೈಗೊಂಡು ಸಂಘದಿಂದ ಸಮಂಜಸವಾದ ಅನುಪಾಲನೆ ಪಡೆಯಲು ಕ್ರಮವಹಿಸಲಾಗುತ್ತಿದೆ.

<table>
<tr>
<td>ಆ)</td>
<td>ಸದರಿ ಕೋ-ಅಪರೇಟಿವ್ ಸೊಸೈಟಿಯಲ್ಲಿ ನೊಂದಣಿಯಾಗಿರುವ ಸದಸ್ಯರಿಗೆ ನಿವೇಶನಗಳನ್ನು ಹಂಚಿರುವ ಪ್ರಕರಣ ಪೂರ್ಣಗೊಂಡಿದ್ದರೂ ಸಹ, ಇತ್ತೀಚಿನ ಸೊಸೈಟಿ ವತಿಯಿಂದ ಹಂಚಿಕೆಯಾದ ನಿವೇಶನಗಳನ್ನು ಅಕ್ರಮವಾಗಿ ಬೇರೆಯವರಿಗೆ ಮರುಹಂಚಿಕೆ / ನೊಂದಣಿ ಮಾಡಿ ಸದಸ್ಯರಲ್ಲಿ ಗೊಂದಲ ಸೃಷ್ಟಿಸಿರುವ ಪ್ರಕರಣ ಕುರಿತು ಸರ್ಕಾರದ ಕ್ರಮವೇನು? (ವಿವರ ನೀಡುವುದು)</td>
<td>ಸಂಘದಲ್ಲಿ ಅಕ್ರಮವಾಗಿ ನಿವೇಶನಗಳನ್ನು ಬೇರೆಯವರಿಗೆ ಮರು ಹಂಚಿಕೆ ಮಾಡಿ ನೊಂದಣಿ ಮಾಡುತ್ತಿರುವ ಬಗ್ಗೆ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, ಮೈಸೂರು ರವರ ನ್ಯಾಯಾಲಯದಲ್ಲಿ 02 ಪ್ರಕರಣಗಳು ಕಲಂ 70 ರಡಿಯಲ್ಲಿ ದಾವಾ ದಾಖಲಾಗಿದ್ದು, ಅವುಗಳ ವಿವರಣೆಯು ಈ ಕೆಳಕಂಡಂತಿದ್ದು, ಪ್ರಗತಿಯಲ್ಲಿರುತ್ತವೆ.
<table>
<tr><th>ಕ್ರ. ಸಂ.</th><th>ಪ್ರಕರಣದ ಸಂಖ್ಯೆ</th><th>ಪ್ರಕರಣದ ಪ್ರಸ್ತುತ ವಿಚಾರಣಾ ಹಂತ</th></tr>
<tr><td>1.</td><td>4/2012-13</td><td>ತಿದ್ದುಪಡಿ ಅರ್ಜಿಯ ಮೇಲೆ ಪ್ರತಿವಾದಿಗಳು ಆಕ್ಷೇಪಣೆ ಸಲ್ಲಿಸಲು ಬಾಕಿ</td></tr>
<tr><td>2.</td><td>1/2020-21</td><td>ಪ್ರತಿವಾದಿಯವರಿಂದ ಸಾಕ್ಷಿ ವಿಚಾರಣೆ.</td></tr>
</table>
</td>
</tr>
<tr>
<td>ಇ)</td>
<td>ಸದರಿ ಪ್ರಕರಣಗಳನ್ನು ಬೇರೆ ಸಹಕಾರ ಸಂಘಗಳಲ್ಲಿ ಅನುಕರಣೆ ಮಾಡುವುದನ್ನು ತಡೆಗಟ್ಟಲು ಸರ್ಕಾರದ ಕ್ರಮವೇನು? (ವಿವರ ನೀಡುವುದು)</td>
<td>ಸಹಕಾರ ಸಂಘಗಳ ಪರಿವೀಕ್ಷಣೆ ಮಾಡಿ ಸಹಕಾರಿ ಕಾಯ್ದೆ, ನಿಯಮ, ಸಂಘದ ಬೈಲಾ ವಿರುದ್ಧವಾಗಿ ಕಾರ್ಯನಿರ್ವಹಿಸದಂತೆ ಮೇಲ್ವಿಚಾರಣೆ ಮಾಡಿ ಕ್ರಮವಹಿಸಲಾಗುವುದು.</td>
</tr>
</table>

ಸಿಒ 39 ಸಿಹೆಚ್‌ಎಸ್ 2021 (ಇ)

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು